# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1426 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎನ್ ನಾಗರಾಜು (ಎಂ.ಟಿ.ಬಿ)<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 20.03.2025 |
| ಉತ್ತರಿಸುವ ಸಚಿವರು. | : | ಗೃಹ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹೊಸಕೋಟೆ ತಾಲ್ಲೂಕಿನ ಕಟ್ಟಿಗೇನಹಳ್ಳಿ, ಬೈಲನರಸಾಪುರ, ಮೇಡಿಮಲ್ಲಸಂದ್ರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಕ್ರಮವಾಗಿ ರಕ್ತಚಂದನ ಮರಗಳ ಸಾಗಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೊಸಕೋಟೆ ತಾಲ್ಲೂಕಿನ ಕಟ್ಟಿಗೇನಹಳ್ಳಿ, ಬೈಲನರಸಾಪುರ, ಮೇಡಿಮಲ್ಲಸಂದ್ರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಕ್ರಮವಾಗಿ ರಕ್ತಚಂದನ ಮರಗಳ ಸಾಗಾಣಿಕೆ ಮಾಡುತ್ತಿರುವ ಕುರಿತು ಪ್ರಕರಣಗಳು ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು; | ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಕಟ್ಟಿಗೇನಹಳ್ಳಿ, ಬೈಲನರಸಾಪುರ, ಮೇಡಿಮಲ್ಲಸಂದ್ರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ವ್ಯಾಪ್ತಿಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಅಕ್ರಮವಾಗಿ ರಕ್ತಚಂದನ ಮರಗಳ ಸಾಗಾಣಿಕೆ ಮಾಡುತ್ತಿರುವ ಕುರಿತಂತೆ ಕಳೆದ 2021, 2022, 2023 & 2024ನೇ ಸಾಲಿನಲ್ಲಿ ಒಟ್ಟು 14 ಪ್ರಕರಣಗಳನ್ನು ದಾಖಲಿಸಿಕೊಂಡು, 34 ಜನ ಆರೋಪಿಗಳನ್ನು ಬಂಧಿಸಿ, ಆರೋಪಿಗಳಿಂದ ಒಟ್ಟು 5650.17 ಕೆ.ಜಿಗಳ ರಕ್ತಚಂದನ ತುಂಡುಗಳನ್ನು ಜಪ್ತಿಪಡಿಸಿಕೊಳ್ಳಲಾಗಿದೆ. ಅವುಗಳ ಅಂದಾಜು ಮೌಲ್ಯ 1,47,77,600 ರೂಗಳಾಗಿರುತ್ತದೆ.<br><br>ವರ್ಷಾವಾರು ಮತ್ತು ಪ್ರಕರಣವಾರು ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ.<br><br>**ಅಕ್ರಮವಾಗಿ ರಕ್ತಚಂದನ ಮರಗಳ ಸಾಗಾಣಿಕೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳ ವಿವರಗಳು:**<br><br>➢ ಹೊಸಕೋಟೆ ತಾಲ್ಲೂಕಿನ ಕಟ್ಟಿಗೇನಹಳ್ಳಿ, ಬೈಲನರಸಾಪುರ, ಮೇಡಿಮಲ್ಲಸಂದ್ರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಕ್ರಮವಾಗಿ ರಕ್ತಚಂದನ ಮರಗಳ ಸಾಗಾಣಿಕೆ ಮಾಡುತ್ತಿರುವವರ ಮೇಲೆ ನಿಗಾವಹಿಸಿ, ಸಿಬ್ಬಂದಿಯವರನ್ನು ನೇಮಕ ಮಾಡಿ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.<br>➢ ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಯಲ್ಲಿ ಗಸ್ತು ಕರ್ತವ್ಯಕ್ಕೆ ಸಿಬ್ಬಂದಿಯವರನ್ನು ನೇಮಕ ಮಾಡಿ, ಅನುಮಾನಾಸ್ಪದ ವಾಹನಗಳನ್ನು ತಪಾಸಣೆ ಮಾಡಿಸಲಾಗಿರುತ್ತದೆ. |

| | | |
|---|---|---|
| | | ➢ ಠಾಣಾ ಗುಪ್ತ ವಿಭಾಗದ ಸಿಬ್ಬಂದಿಯವರಿಗೆ ಈ ಬಗ್ಗೆ ಸೂಚನೆ ನೀಡಿ, ಅಕ್ರಮ ರಕ್ತ ಚಂದನ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವಂತೆ ಸೂಚಿಸಲಾಗಿರುತ್ತದೆ.<br>➢ ರಾತ್ರಿ ಸಮಯದಲ್ಲಿ ಪ್ರಮುಖ ರಸ್ತೆಗಳಲ್ಲಿ ನಾಕಬಂದಿ ಮಾಡಿ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದ್ದು, ಅಕ್ರಮ ರಕ್ತ ಚಂದನ ಸಾಗಾಣಿಕೆ ಆಗದಂತೆ ಸೂಕ್ತ ಕ್ರಮವನ್ನು ಕೈಗೊಳ್ಳಲಾಗಿರುತ್ತದೆ.<br>➢ ಅಕ್ರಮವಾಗಿ ರಕ್ತ ಚಂದನ ಸಾಗಾಣಿಕೆ ಮಾಡುತ್ತಿರುವವರ ವಿರುದ್ಧ ಎಂ.ಒ.ಬಿ ಹಾಳೆಗಳನ್ನು ಹಾಗೂ ರೌಡಿ ಹಾಳೆಯನ್ನು ತೆರೆದು ಆರೋಪಿಗಳ ಚಲನವಲನಗಳ ಮೇಲೆ ನಿಗಾ ವಹಿಸಲಾಗಿರುತ್ತದೆ.<br>➢ ಅರಣ್ಯ ಸಂರಕ್ಷಣೆ /ಅರಣ್ಯ ಸಂಬಂಧಿತ ಕಳ್ಳತನ ಪ್ರಕರಣಗಳ ತನಿಖೆ ಮತ್ತು ನಿಗಾವಣೆಗಾಗಿ ಸಿಐಡಿ ವಿಭಾಗದಲ್ಲಿ ಡಿಐಜಿ/ಎಸ್.ಪಿ ರವರ ನೇತೃತ್ವದಲ್ಲಿ ಫಾರೆಸ್ಟ್ ಮೊಬೈಲ್ ಸ್ಕ್ವಾಡ್ ಕಾರ್ಯನಿರ್ವಹಿಸುತ್ತಿದೆ.<br>➢ ರಾಜ್ಯದಲ್ಲಿ ಅರಣ್ಯ ಸಂರಕ್ಷಣೆಗಾಗಿ 'ಕರ್ನಾಟಕ ಫಾರೆಸ್ಟ್ ಆಕ್ಟ್-1963' ಕಾಯ್ದೆಯನ್ನು ಜಾರಿಗೆ ತಂದಿದ್ದು, ಸದರಿ ಕಾಯ್ದೆಯ ಅನ್ವಯ ಅರಣ್ಯ ಪ್ರದೇಶದಲ್ಲಿನ ಕಳ್ಳತನ ಕೃತ್ಯಗಳಲ್ಲಿನ ಆರೋಪಿಗಳ ವಿರುದ್ಧ ದೂರುಗಳನುಸಾರ ಪ್ರಕರಣಗಳನ್ನು ದಾಖಲಿಸಿಕೊಂಡು ಸೂಕ್ತ ಕಾನೂನು ಕ್ರಮಗಳನ್ನು ನಿಯಮಾನುಸಾರ ಜರುಗಿಸಲಾಗುತ್ತಿದೆ. |
| ಇ) | ಹೊರ ರಾಜ್ಯದ ಪೊಲೀಸರು ದಾಳಿ ಮಾಡಿ ರಕ್ತಚಂದನ ಮರಗಳನ್ನು ವಶಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಆಂಧ್ರ ಪ್ರದೇಶದ ಪೊಲೀಸರು ದಿನಾಂಕ:05/02/2025 ರಂದು ಆಂಧ್ರಪ್ರದೇಶ ತಿರುಪತಿಯ RSAFTF PS Cr.No.08/2025 ಕಲಂ 303(2) r/w 3(5) BNS, 49, 61 (2) BNS and Sec. (1)(d)(i)(a) r/w 20(1), ii,iii, iv, x 36(a) r/w 32A, 29(4) (a)(i) of AP Forest Amendment Act 2016 ಪ್ರಕರಣದಲ್ಲಿ ಆಂಧ್ರಪ್ರದೇಶದಿಂದ ರಕ್ತ ಚಂದನ ಸಾಗಾಣಿಕೆ ಮಾಡುತ್ತಿರುವ ಬಗ್ಗೆ ಆರೋಪಿಯ ಮಾಹಿತಿ ಮೇರೆಗೆ ರಕ್ತ ಚಂದನ ಸಾಗಾಣಿಕೆ ಮಾಡುತ್ತಿರುವ ವಾಹನವನ್ನು ಹಿಂಬಾಲಿಸಿಕೊಂಡು ಬಂದು ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣಾ ಸರಹದ್ದಿನಲ್ಲಿ ತಡೆದು ವಾಹನದಲ್ಲಿ ಇದ್ದ ರಕ್ತಚಂದನದ ತುಂಡುಗಳನ್ನು ಹಾಗೂ ಸಾಗಾಣಿಕೆ ಮಾಡುತ್ತಿರುವವರನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. |
| ಈ) | ಹಾಗಿದ್ದಲ್ಲಿ ನಮ್ಮ ರಾಜ್ಯದ ಪೊಲೀಸರು ದಾಳಿ ಮಾಡಿ ರಕ್ತಚಂದನ ವಶಪಡಿಸಿಕೊಂಡು ಕ್ರಮ ಕೈಗೊಳ್ಳದಿರಲು ಇರುವ ಅಡತಡೆಗಳೇನು? | ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಿಂದ ಅಕ್ರಮ ರಕ್ತಚಂದನ ಸಾಗಾಣಿಕೆಯನ್ನು ತಡೆಗಟ್ಟಲು ಅಕ್ರಮ ರಕ್ತ ಚಂದನ ಸಾಗಾಣಿಕೆಯಲ್ಲಿ ತೊಡಗಿರುವವರ ವಿರುದ್ಧ ಮಾಹಿತಿಗಳ ಆಧಾರದ ಮೇಲೆ ಕಾನೂನು ರೀತ್ಯಾ ಪ್ರಕರಣಗಳನ್ನು ದಾಖಲಿಸಿಕೊಂಡು, ಅಕ್ರಮವಾಗಿ ಸಾಗಾಣಿಕೆ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ |

| | | |
|---|---|---|
| | | ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಇಂತಹ ಪ್ರಕರಣಗಳನ್ನು ತಡೆಯಲು ಯಾವುದೇ ಅಡೆತಡೆಗಳು ಇರುವುದಿಲ್ಲ.<br><br>ಬೆಂಗಳೂರು ಜಿಲ್ಲೆಯಲ್ಲಿ 2015ನೇ ಸಾಲಿನಿಂದ 2025 (ಫೆಬ್ರುವರಿ) ವರೆಗೆ ಒಟ್ಟು 80 ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಒಟ್ಟು 179 ಆರೋಪಿಗಳನ್ನು ಬಂಧಿಸಲಾಗಿರುತ್ತದೆ. ಬಂಧಿತ ಆರೋಪಿತರಿಂದ ಒಟ್ಟು 31835.9 ಕೆ.ಜಿ. ರಕ್ತ ಚಂದನದ ಮರದ ತುಂಡುಗಳನ್ನು ಜಪ್ತಿ ಪಡಿಸಿಕೊಳ್ಳಲಾಗಿರುತ್ತದೆ. ಇವುಗಳ ಅಂದಾಜು ಮೌಲ್ಯ ರೂ.1,51,19610/- ಗಳಾಗಿರುತ್ತದೆ. |

ಸಂಖ್ಯೆ: ಹೆಚ್‌ಡಿ 37 ಪಿಸಿಕ್ಯೂ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು

## ವಿಧಾನ ಸಭೆಯ ಚುಕ್ಕೆ ಗುರುತಿನ ಪ್ರಶ್ನೆ ಸಂಖೆ: 1426ಕ್ಕೆ ಅನುಬಂಧ

**2021**

| ಕ್ರ.ಸಂ. | ಪೊಲೀಸ್ ಠಾಣೆ ಹೆಸರು | ಮೊ.ಸಂ. ಸಂಖ್ಯೆ & ಕಲಂ | ಆರೋಪಿಗಳ ವಿವರಗಳು | ವಶಪಡಿಸಿಕೊಂಡ ರಕ್ತಚಂದನದ ತೂಕ & ಅಂದಾಜು ಮೌಲ್ಯ | ಪ್ರಕರಣದ ಪ್ರಸ್ತುತ ಹಂತ |
|---|---|---|---|---|---|
| 1 | ಹೊಸಕೋಟೆ | 287/2021 ಕಲಂ 145, 144, 24, 62, 104 ಕೆ.ಎಫ್ ಆಕ್ಟ್ & 379 ಐಪಿಸಿ. | 1] ವಸೀಂ ಕಟ್ಟಿಗೇನಹಳ್ಳಿ 2] ನಯಾಜ್ ಮೇಡಿ ಮಲ್ಲಸಂದ್ರ 3] ಇರ್ಫಾನ್ ಮೇಡಿಮಲ್ಲಸಂದ್ರ ಗ್ರಾಮ 4] ಶಬ್ಬೀರ್ ಬಿನ್ ಕಾಸೀಂ ಅಹ್ಮದ್ 35 ವರ್ಷ ವಾಸ-ಭಾಗೂರು ಸೋಣ್ಣೆನಹಳ್ಳಿ ಗ್ರಾಮ ಮಾಲೂರು ಕೋಲಾರ. | 82 ರಕ್ತ ತುಂಡುಗಳು 2112 ಕೆಜಿ | ಸಿಸಿ ನಂ 3869/2022 ವಿಚಾರಣೆಯಲ್ಲಿ ರುತ್ತದೆ. |
| **ವಿವರ:**ದಿನಾಂಕ 01/09/2021 ರಂದು ಕೋಲಾರ ಕಡೆಯಿಂದ ಹೊಸಕೋಟೆ ಕಡೆಗೆ KA 08 3796 TATA Goods ವಾಹನದಲ್ಲಿ ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೆ ರಕ್ತ ಚಂದನ ಮರದ ತುಂಡುಗಳನ್ನು ಸಾಗಿಸುತ್ತಿರುವುದಾಗಿ ಬಾತ್ಮಿದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ ಒಟ್ಟು 82 ರಕ್ತಚಂದನ ತುಂಡುಗಳಿದ್ದು, ಇವುಗಳ ಬೆಲೆ ಸುಮಾರು 60 ಲಕ್ಷ ರೂಗಳು. ರಕ್ತ ಚಂದನ ಸಾಗಿಸುತ್ತಿದ್ದ ಗೂಡ್ಸ್ ವಾಹನ ಮತ್ತು 2 ಕಾರುಗಳು ಬೆಲೆ ಸುಮಾರು 5ಲಕ್ಷ ರೂಗಳಿರಬಹುದೆಂದು ನಾವು ಮತ್ತು ಪಂಚರು ಅಭಿಪ್ರಾಯ ಪಟ್ಟಿರುತ್ತೇವೆ, ಇತ್ಯಾದಿಯಾಗಿ ನೀಡಿದ ವರದಿಯನ್ನು ಪಡೆದು ಪ್ರಕರಣ ದಾಖಲಿಸಲಾಗಿರುತ್ತದೆ. | | | | | |
| 2 | ಟಿ.ಎಸ್. ಹಳ್ಳಿ | ಮೊ.ಸಂ.16/2021 ಕಲಂ 24, 62, 80, ಕೆ.ಎಫ್. ಆಕ್ಟ್ ಜೊತೆಗೆ 144, 145, ಕೆ.ಎಫ್. ರೂಲ್ಸ್ & 379 ಐಪಿಸಿ | ಜಮೀಲ್ ಖಾನ್, 45 ವರ್ಷ, ಕಟ್ಟಿಗೇನಹಳ್ಳಿ, ಗ್ರಾಮ ಹೊಸಕೋಟೆ ತಾಲ್ಲೂಕು | 104 ಕೆ.ಜಿ ರಕ್ತಚಂದನದ ತುಂಡುಗಳು ಅಂದಾಜು ಮೌಲ್ಯ 4,16000/- | ಸದರಿ ಪ್ರಕರಣವು ಮಾನ್ಯ ಸಿ.ಜೆ. & ಜೆ.ಎಂ.ಎಫ್.ಸಿ ನ್ಯಾಯಾಲಯದ ಸಿಸಿ. ನಂ.8632/2021 ರಲ್ಲಿ ವಿಚಾರಣೆಯಲ್ಲಿ ರುತ್ತದೆ. |
| **ವಿವರ:** ದಿನಾಂಕ 15/02/2022 ರಂದು ಅಕ್ರಮವಾಗಿ ಕಳ್ಳಸಾಗಣೆ ಮಾಡುತ್ತಿದ್ದ 104 ಕೆ.ಜಿ. ತೂಕದ ರಕ್ತಚಂದನ ಮರದ ತುಂಡುಗಳನ್ನು ವಶಕ್ಕೆ ಪಡೆದು ಮೇಲ್ಕಂಡ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಲಾಗಿರುತ್ತದೆ. | | | | | |

**2022**

| ಕ್ರ.ಸಂ. | ಪೊಲೀಸ್ ಠಾಣೆ ಹೆಸರು | ಮೊ.ಸಂ. ಸಂಖ್ಯೆ & ಕಲಂ | ಆರೋಪಿಗಳ ವಿವರಗಳು | ವಶಪಡಿಸಿಕೊಂಡ ರಕ್ತಚಂದನದ ತೂಕ & ಅಂದಾಜು ಮೌಲ್ಯ | ಪ್ರಕರಣದ ಪ್ರಸ್ತುತ ಹಂತ |
|---|---|---|---|---|---|
| 1 | ಟಿ.ಎಸ್.ಹಳ್ಳಿ | ಮೊ.ಸಂ.16/2022 ಕಲಂ 24, 62, 80, ಕೆ.ಎಫ್. ಆಕ್ಟ್ ಜೊತೆಗೆ 144, 145, ಕೆ.ಎಫ್. ರೂಲ್ಸ್ & 379 ಐಪಿಸಿ | 1.ಸೈಯದ್ ಇನಾಯತ್ 2.ಸೈಯದ್ ಲಿಕಾಯತ್ ಕಟ್ಟಿಗೇನಹಳ್ಳಿ ಗ್ರಾಮ, ಹೊಸಕೋಟೆ ತಾಲ್ಲೂಕು | 300 ಕೆ.ಜಿ. ರಕ್ತ ತುಂಡುಗಳು ಅಂದಾಜು ಮೌಲ್ಯ 1200000/- | ಸದರಿ ಪ್ರಕರಣವು ಮಾನ್ಯ ಸಿ.ಜೆ. & ಜೆ.ಎಂ.ಎಫ್.ಸಿ ನ್ಯಾಯಾಲಯದ ಸಿಸಿ. ನಂ.4244/2022 ರಲ್ಲಿ ವಿಚಾರಣೆಯಲ್ಲಿರುತ್ತದೆ |
| **ವಿವರ:**ದಿನಾಂಕ 15/02/2022 ರಂದು ಅಕ್ರಮವಾಗಿ ಕಳ್ಳಸಾಗಣೆ ಮಾಡುತ್ತಿದ್ದ 10 ರಕ್ತಚಂದನದ ಮರದ ತುಂಡುಗಳನ್ನು ವಶಕ್ಕೆ ಪಡೆದು ಮೇಲ್ಕಂಡ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿರುತ್ತದೆ. | | | | | |
| 2 | ಟಿ.ಎಸ್. ಹಳ್ಳಿ | ಮೊ.ಸಂ. 80/2022 ಕಲಂ 24, 62, 80, ಕೆ.ಎಫ್. ಆಕ್ಟ್ ಜೊತೆಗೆ 379 ಐಪಿಸಿ | ಇಮ್ತಿಯಾಜ್, ಕಟ್ಟಿಗೇನಹಳ್ಳಿ ಗ್ರಾಮ, ಜಡಿಗೇನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಜಿಲ್ಲೆ | 281 ಕೆ.ಜಿ ರಕ್ತಚಂದನದ ತುಂಡುಗಳು ಅಂದಾಜು ಮೌಲ್ಯ 11240000/- | ಸದರಿ ಪ್ರಕರಣವು ಮಾನ್ಯ ಸಿ.ಜೆ. & ಜೆ.ಎಂ.ಎಫ್.ಸಿ ನ್ಯಾಯಾಲಯದ ಸಿಸಿ. ನಂ.1734/2023 ರಲ್ಲಿ ವಿಚಾರಣೆಯಲ್ಲಿರುತ್ತದೆ. |
| **ವಿವರ:**ದಿನಾಂಕ 5/06/2022 ರಂದು ಅಕ್ರಮವಾಗಿ ಕಳ್ಳಸಾಗಣೆ ಮಾಡುತ್ತಿದ್ದ ಸುಮಾರು 11,24,000 ಮೌಲ್ಯದ 281 ಕೆ.ಜಿ ರಕ್ತಚಂದನದ ಮರದ ತುಂಡುಗಳನ್ನು ವಶಕ್ಕೆ ಪಡೆದು ಮೇಲ್ಕಂಡ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಲಾಗಿರುತ್ತದೆ. | | | | | |
| 3 | ಟಿ.ಎಸ್. ಹಳ್ಳಿ | ಮೊ.ಸಂ. 84/2022 ಕಲಂ 24, 62, 80, ಕೆ.ಎಫ್. ಆಕ್ಟ್ ಜೊತೆಗೆ 379 ಐಪಿಸಿ | 1.ಅಯಾಜ್ ಖಾನ್ ಬಿನ್ ಒಬೇದುಲ್ಲಾ ಖಾನ್, 45 ವರ್ಷ, ಕಟ್ಟಿಗೇನಹಳ್ಳಿ ಗ್ರಾಮ, 2.ಜಮೀರ್ ಖಾನ್ @ ಚಿಂದಿ ಜಮೀರ್ @ ಖಾಲ ಜಮೀರ್ ಬಿನ್ ಲೇ.ಅನ್ವರ್ ಖಾನ್, 32 ವರ್ಷ, ಕಟ್ಟಿಗೇನಹಳ್ಳಿ ಗ್ರಾಮ, 3.ಇರ್ಫಾನ್ ಬಿನ್ ಅಬುಬಕರ್, ಕಟ್ಟಿಗೇನಹಳ್ಳಿ ಗ್ರಾಮ, ಜಡಿಗೇನಹಳ್ಳಿ | 565.5 ಕೆ.ಜಿ ರಕ್ತಚಂದನದ ತುಂಡುಗಳು ಅಂದಾಜು ಮೌಲ್ಯ 2262000/- | ಸದರಿ ಪ್ರಕರಣವು ಮಾನ್ಯ ಸಿ.ಜೆ. & ಜೆ.ಎಂ.ಎಫ್.ಸಿ ನ್ಯಾಯಾಲಯದ ಸಿಸಿ. ನಂ.4766/2023 ರಲ್ಲಿ ವಿಚಾರಣೆಯಲ್ಲಿರುತ್ತದೆ |

| | | | | | |
|---|---|---|---|---|---|
| | | | ಹೋಬಳಿ, ಹೊಸಕೋಟೆ ತಾಲ್ಲೂಕು. | | |
| **ವಿವರ:**ದಿನಾಂಕ:14/06/2022 ರಂದು ಅಕ್ರಮವಾಗಿ ಕಳ್ಳಸಾಗಣೆ ಮಾಡುತ್ತಿದ್ದ ಸುಮಾರು 2262000 ಮೌಲ್ಯದ 565.5 ಕೆ.ಜಿ ರಕ್ತಚಂದನದ ಮರದ ತುಂಡುಗಳನ್ನು ವಶಕ್ಕೆ ಪಡೆದು ಮೇಲ್ಕಂಡ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿರುತ್ತದೆ. | | | | | |
| 4 | ಟಿ.ಎಸ್. ಹಳ್ಳಿ | ಮೊ.ಸಂ. 85/2022 ಕಲಂ 24, 62, 80, ಕೆ.ಎಫ್. ಆಕ್ಟ್ ಜೊತೆಗೆ 379 ಐಪಿಸಿ | 1.ಚಾಂದ್ ಪಾಷಾ @ ಮಹತಾಬ್ ಬೇಗ್ ಬಿನ್ ರೆಹಮತ್ ಉಲ್ಲಾ ಬೇಗ್ @ ಪ್ಯಾರೇಜಾನ್, ೪೭ ವರ್ಷ, ಕಟ್ಟಿಗೇನಹಳ್ಳಿ ಗ್ರಾಮ, ಜಡಿಗೇನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು. 2.ಸಲ್ಮಾನ್ ಷರೀಪ್ @ ಎ.ಸಿ.ರಾಜು ಕಟ್ಟಿಗೇನಹಳ್ಳಿ ಗ್ರಾಮ, ಜಡಿಗೇನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು. | 162.5 ಕೆ.ಜಿ ರಕ್ತಚಂದನದ ತುಂಡುಗಳು ಅಂದಾಜು ಮೌಲ್ಯ 6,50,000/- | ಸದರಿ ಪ್ರಕರಣವು ಮಾನ್ಯ ಸಿ.ಜೆ. & ಜೆ.ಎಂ.ಎಫ್.ಸಿ ನ್ಯಾಯಾಲಯದ ಸಿಸಿ. ನಂ.1730/2023 ರಲ್ಲಿ ವಿಚಾರಣೆಯಲ್ಲಿ ರುತ್ತದೆ |
| **ವಿವರ:** ದಿನಾಂಕ 14/06/2022 ರಂದು ಅಕ್ರಮವಾಗಿ ಕಳ್ಳಸಾಗಣೆ ಮಾಡುತ್ತಿದ್ದ ಸುಮಾರು 65000 ಮೌಲ್ಯದ 162.5 ಕೆ.ಜಿ ಇರುವ 5 ರಕ್ತಚಂದನದ ಮರದ ತುಂಡುಗಳನ್ನು ವಶಕ್ಕೆ ಪಡೆದು ಮೇಲ್ಕಂಡ ಆರೋಪಿಯಗಳ ವಿರುದ್ಧ ಪ್ರಕರಣ ದಾಖಲಿಸಲಾಗಿರುತ್ತದೆ. | | | | | |

**2023**

<table>
<tr><th>ಕ್ರ.ಸಂ.</th><th>ಪೊಲೀಸ್ ಠಾಣೆ ಹೆಸರು</th><th>ಮೊ.ಸಂ. ಸಂಖ್ಯೆ & ಕಲಂ</th><th>ಆರೋಪಿಗಳ ವಿವರಗಳು</th><th>ವಶಪಡಿಸಿಕೊಂಡ ರಕ್ತಚಂದನದ ತೂಕ & ಅಂದಾಜು ಮೌಲ್ಯ</th><th>ಪ್ರಕರಣದ ಪ್ರಸ್ತುತ ಹಂತ</th></tr>
<tr><td>1</td><td>ಹೊಸಕೋಟೆ</td><td>ಮೊ.ಸಂ.331/2023 ಕಲಂ 144, 145, 62, 24, 80 ಕೆ.ಎಫ್. ಆಕ್ಟ್ & 379 ಐಪಿಸಿ</td><td>1] ಅಲ್ಲಾಬಕ್ಷಾ @ ಗೋರು ಬಿನ್ ಪ್ಯಾರಾಜಾನ್ 46 ವರ್ಷ ವಾಸ- ಕಟ್ಟಿಗೇನಹಳ್ಳಿ ಗ್ರಾಮ ಹೊಸಕೋಟೆ 2] ಜಮೀಲ್ ಖಾನ್ @ ಜಮೀಲ್</td><td>15.520 ಕೆ.ಜಿ. ರಕ್ತ ತುಂಡುಗಳು</td><td>ಸಿಸಿ. ನಂ.8907/2023 ರಲ್ಲಿ ವಿಚಾರಣೆಯಲ್ಲಿರುತ್ತದೆ</td></tr>
<tr><td colspan="6">ವಿವರ:ದಿನಾಂಕ: 14/10/2023 ರಂದು ಜಡಿಗೇನಹಳ್ಳಿಯಿಂದ ಹೊರಟು ಬೆಳಿಗ್ಗೆ 5.15 ಗಂಟೆ ಸುಮಾರಿಗೆ ನಮಗೆ ಬಂದ ಮಾಹಿತಿ ಸ್ಥಳಕ್ಕೆ ಹೋಗಿ ಸ್ವಲ್ಪ ದೂರದಲ್ಲಿ ಜೀಪ್ ನ್ನು ನಿಲ್ಲಿಸಿ, ಎಲ್ಲರೂ ಜೀಪಿನಿಂದ ಇಳಿದು ನೋಡಲಾಗಿ ಒಬ್ಬ ಅಸಾಮಿಯು ಒಂದು ಪ್ಲಾಸ್ಟಿಕ್ ಚೀಲವನ್ನು ತನ್ನ ಜೊತೆಯಲ್ಲಿ ಇಟ್ಟುಕೊಂಡು ನಿಂತಿದ್ದು, ನಾವುಗಳು ಸುತ್ತುವರೆದು ಸದರಿ ಅಸಾಮಿಯನ್ನು ಹಿಡಿದುಕೊಂಡು ಪಂಚರ ಸಮಕ್ಷಮ ಹೆಸರು ವಿಳಾಸ ಕೇಳಲಾಗಿ ಅಲ್ಲಾಬಕಾಷ್ @ ಗೋರು, ಬಿನ್ ಪ್ಯಾರಜಾನ್, 46 ವರ್ಷ, ಮುಸ್ಲಿಂ ಜನಾಂಗ, ತೋಪು ವ್ಯಾಪಾರ, ಕಟ್ಟಿಗೇನಹಳ್ಳಿ ಗ್ರಾಮ, ಜಡಿಗೇನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು ಅಂತ ತಿಳಿಸಿದ್ದು, ನನಗೆ ಆಂದ್ರಪ್ರದೇಶ ವಾಸಿ, ಹಾಲಿ ನಮ್ಮೂರಿನಲ್ಲಿ ವಾಸವಿರುವ ಜಮೀಲ್ ಖಾನ್ @ ಜಮೀಲ್ ನನ್ನನ್ನು ಕರೆದುಕೊಂಡು ಹೋಗಿ ಆಂದ್ರಪ್ರದೇಶ ರಾಜ್ಯದ ಒಂದು ಜಾಗದಲ್ಲಿ ರಕ್ತ ಚೆಂದನದ ತುಂಡುಗಳನ್ನು ತೆಗೆದುಕೊಂಡು ಇಬ್ಬರು ಅಲ್ಲಿಂದ ಬಂದಿದ್ದು, ಜಮೀಲ್ ಮನೆ ಬಳಿ ಹೋಗಿ ಬರುತ್ತೇನೆ ಇಲ್ಲೇ ನಿಂತಿರು, ಬೆಂಗಳೂರು ಕಡೆಗೆ ಹೋಗಿ ಮಾರಾಟ ಮಾಡಿ ಬರೋಣ ಅಂತ ನಿಲ್ಲಿಸಿ ಹೋಗಿರುತ್ತಾನೆಂತ ತಿಳಿಸಿದನು. ನಂತರ ಅಲ್ಲಾ ಬಕಾಷನನ್ನು ವಿಚಾರ ಮಾಡಲಾಗಿ ನನ್ನ ಬಳಿ ರಕ್ತ ಚೆಂದನದ ತುಂಡುಗಳನ್ನು ಬಿಟ್ಟು ಬೇರೇನು ಇರುವುದಿಲ್ಲವೆಂದು ತಿಳಿಸಿದನು. ಅಲ್ಲಾಬಕಾಷನ ಬಳಿಯಿದ್ದ ಪ್ಲಾಸ್ಟಿಕ್ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಲಾಗಿ ಚೀಲದಲ್ಲಿ 3 ರಕ್ತಚಂದನದ ಮರದ ತುಂಡುಗಳಿದ್ದು, ಸ್ಥಳಕ್ಕೆ ಅಳತೆಯ ಟೇಪ್ ಹಾಗೂ ಸ್ಕೇಲ್ ಅನ್ನು ತರಿಸಿಕೊಂಡು ಒಂದೊಂದಾಗಿ ಪಂಚನಾಮೆಯಲ್ಲಿ ವಿವರವಾಗಿ ಬರೆದು ತೂಕ ಮಾಡಿ ಅಳತೆ ಮಾಡಲಾಗಿರುತ್ತದೆ. ರಕ್ತ ಚಂದನದ ತುಂಡುಗಳು ಒಟ್ಟು ತೂಕ 15.520 ಕೆಜಿ/ಗ್ರಾಂ ಗಳಿರುತ್ತದೆ ಎಂದು ಪ್ರಕರಣ ದಾಖಲಿಸಲಾಗಿರುತ್ತದೆ.</td></tr>
<tr><td>2</td><td>ಹೊಸಕೋಟೆ</td><td>ಮೊ.ಸಂ. 362/2023 ಕಲಂ 87,86 ಕೆ.ಎಫ್. ಆಕ್ಟ್ & 379 ಐಪಿಸಿ</td><td>1] ಸಯದ್ ಬಸೀರ್ 45 ವರ್ಷ ವಾಸ- ಕನಕ ನಗರ ಹೊಸಕೋಟೆ ಟೌನ್</td><td>65 ಕೆ.ಜಿ ರಕ್ತಚಂದನದ ತುಂಡುಗಳು ಅಂದಾಜು ಮೌಲ್ಯ 650000/-</td><td>ಸಿಸಿ. ನಂ.177/2023 ರಲ್ಲಿ ವಿಚಾರಣೆಯಲ್ಲಿರುತ್ತದೆ.</td></tr>
<tr><td colspan="6">ವಿವರ:ದಿನಾಂಕ 5/06/2022 ರಂದು ಅಕ್ರಮವಾಗಿ ಕಳ್ಳಸಾಗಣೆ ಮಾಡುತ್ತಿದ್ದ ಸುಮಾರು 11,24,000 ಮೌಲ್ಯದ 281 ಕೆ.ಜಿ ರಕ್ತಚಂದನದ ಮರದ ತುಂಡುಗಳನ್ನು ವಶಕ್ಕೆ ಪಡೆದು ಮೇಲ್ಕಂಡ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಲಾಗಿರುತ್ತದೆ.</td></tr>
<tr><td>3</td><td>ಟಿ.ಎಸ್. ಹಳ್ಳಿ</td><td>ಮೊ.ಸಂ. 27/2023 ಕಲಂ 24, 62, 80, ಕೆ.ಎಫ್. ಆಕ್ಟ್ 144, 145 ರೂಲ್ಸ್ ಜೊತೆಗೆ 379 ಐಪಿಸಿ</td><td>1.ತನಸೀರ್ ಬಿನ್ ನಜೀರ್, ಕಟ್ಟಿಗೇನಹಳ್ಳಿ ಗ್ರಾಮ, ಜಡಿಗೇನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು.</td><td>306.65 ಕೆ.ಜಿ ರಕ್ತಚಂದನದ ತುಂಡುಗಳು ಅಂದಾಜು ಮೌಲ್ಯ 12,26600/-</td><td>ಸದರಿ ಪ್ರಕರಣವು ಮಾನ್ಯ ಸಿ.ಜೆ. & ಜೆ.ಎಂ.ಎಫ್.ಸಿ ನ್ಯಾಯಾಲಯದ ಸಿಸಿ. ನಂ.4771/2023 ರಲ್ಲಿ ವಿಚಾರಣೆಯಲ್ಲಿರುತ್ತದೆ</td></tr>
</table>

| | | | | | |
|---|---|---|---|---|---|
| **ವಿವರ:** ದಿನಾಂಕ:13/02/2023 ರಂದು ಅಕ್ರಮವಾಗಿ ಕಳ್ಳಸಾಗಣೆ ಮಾಡುತ್ತಿದ್ದ 10 ರಕ್ತಚಂದನದ ತುಂಡುಗಳು 255 ಕೆ.ಜಿ ವಶಕ್ಕೆ ಪಡೆದು ಆರೋಪಿಗಯ ವಿರುದ್ಧ ಪ್ರಕರಣ ದಾಖಲಿಸಲಾಗಿರುತ್ತದೆ. | | | | | |
| 4 | ಟಿ.ಎಸ್. ಹಳ್ಳಿ | ಮೊ.ಸಂ. 156/2023 ಕಲಂ , 62, 80, ಕೆ.ಎಫ್. ಆಕ್ಟ್, 144, 145, ಜೊತೆಗೆ 379 ಐಪಿಸಿ | | 288.5 ಕೆ.ಜಿ ರಕ್ತಚಂದನದ ತುಂಡುಗಳು ಅಂದಾಜು ಮೌಲ್ಯ 865500/- | ಸದರಿ ಪ್ರಕರಣವು ಮಾನ್ಯ ಸಿ.ಜೆ. & ಜೆ.ಎಂ.ಎಫ್.ಸಿ ನ್ಯಾಯಾಲಯದ ಸಿಸಿ. ನಂ.2549/2024 ರಲ್ಲಿ ವಿಚಾರಣೆಯಲ್ಲಿರುತ್ತದೆ |
| ದಿನಾಂಕ 20/09/2023 ರಂದು ಕಟ್ಟಿಗೆನಹಳ್ಳಿ ಗ್ರಾಮದ ಸರ್ವೆ ನಂ 58 ರ ಜಮೀನಿನ ನೀಲಗಿರಿ ತೋಪಿನಲ್ಲಿ ಅಕ್ರಮವಾಗಿ ಕಳ್ಳಸಾಗಣೆ ಮಾಡುತ್ತಿದ್ದ 9 ರಕ್ತ ಚಂದನ ಮರದ ತುಂಡುಗಳನ್ನು ವಶಕ್ಕೆ ಪಡೆದು ಮೇಲ್ಕಂಡ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿರುತ್ತದೆ. | | | | | |
| 5 | ಟಿ.ಎಸ್. ಹಳ್ಳಿ | ಮೊ.ಸಂ. 185/2023 ಕಲಂ , 24, 62, 80 ಕೆ.ಎಫ್. ಆಕ್ಟ್, 144, 145 ರೂಲ್ಸ್ ಜೊತೆಗೆ 379 ಐಪಿಸಿ | 1.ಮುಜ್ಜು ಶರೀಫ್ 2.ಆಸೀಫ್ ಖಾನ್ 3.ಸೈಯದ್ ನಜೀರ್ 4.ಪಯಾಜ್ ಷರೀಫ್ @ಫಯ್ಯಾ<br><br>ಕಟ್ಟಿಗೇನಹಳ್ಳಿ ಗ್ರಾಮ, ಜಡಿಗೇನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು. | 102 ಕೆ.ಜಿ ರಕ್ತಚಂದನದ ತುಂಡುಗಳು ಅಂದಾಜು ಮೌಲ್ಯ 408000/- | ಸದರಿ ಪ್ರಕರಣವು ಮಾನ್ಯ ಸಿ.ಜೆ. & ಜೆ.ಎಂ.ಎಫ್.ಸಿ ನ್ಯಾಯಾಲಯದ ಸಿಸಿ. ನಂ.235/2024 ರಲ್ಲಿ ವಿಚಾರಣೆಯಲ್ಲಿರುತ್ತದೆ |
| ದಿನಾಂಕ: 17/11/2023 ರಂದು ಅಕ್ರಮವಾಗಿ ಕಳ್ಳಸಾಗಣೆ ಮಾಡುತ್ತಿದ್ದ 102 ತೂಕದ ರಕ್ತಚಂದನದ ಮರದ ತುಂಡುಗಳನ್ನು ವಶಕ್ಕೆ ಪಡೆದು ಮೇಲ್ಕಂಡ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿರುತ್ತದೆ. | | | | | |

**2024**

<table>
<tr><th>ಕ್ರ.ಸಂ.</th><th>ಪೊಲೀಸ್ ಠಾಣೆ ಹೆಸರು</th><th>ಮೊ.ಸಂ. ಸಂಖ್ಯೆ & ಕಲಂ</th><th>ಆರೋಪಿಗಳ ವಿವರಗಳು</th><th>ವಶಪಡಿಸಿಕೊಂಡ ರಕ್ತಚಂದನದ ತೂಕ & ಅಂದಾಜು ಮೌಲ್ಯ</th><th>ಪ್ರಕರಣದ ಪ್ರಸ್ತುತ ಹಂತ</th></tr>
<tr><td>1</td><td>ಸೂಲಿಬೆಲೆ</td><td>ಮೊ.ಸಂ.15/2024 ಕಲಂ 80 , 24, 62 ಕೆ.ಎಫ್. ಆಕ್ಟ್ 144, 145 ಕೆ.ಎಫ್. ರೂಲ್ಸ್ ಜೊತೆಗೆ 379 ಐಪಿಸಿ</td><td>ಎ1 ಇರ್ಫಾ ಖಾನ್ ಹಾಗೂ ಎ2.ಎ3, .ಎ4.ಎ5 ಮತ್ತು ಎ6 ಮಂಜುನಾಥತಿಮ್ಮಸಂದ್ರ</td><td>882 ಕೆ.ಜಿ. ರಕ್ತ ತುಂಡುಗಳು</td><td>ತನಿಖೆಯಲ್ಲಿರುತ್ತದೆ</td></tr>
<tr><td colspan="6">ದಿನಾಂಕ 12/2/2024 ರಂದು ಪಿಐ ಸಾಹೇಬರು ಪಿಸಿ 1415 ರವರ ಮೂಲಕ ಕಳುಹಿಸಿ ಕೊಟ್ಟ ವರದಿ ಸಾರಾಂಶ ನಾನು ಠಾಣೆಯಲ್ಲಿದ್ದಾಗ ಬಾತ್ಮಿದಾರರು ತಿಮ್ಮಸಂದ್ರ ಗ್ರಾಮದ ವಾಸಿ ಮಂಜುನಾಥ ರವರಿಗೆ ಸೇರಿದ ಕಬ್ಬಿಣದ ಶೀಟ್ ನ ಶಡ್ ನಲ್ಲಿ ಅಕ್ರಮವಾಗಿ ಕಳ್ಳತನದಿಂದ ಎಲ್ಲಿಂದಲೊ ರಕ್ತ ಚಂದನದ ಮರದ ತುಂಡುಗಳನ್ನು ತಂದು ಅಡಗಿಸಿ ಇಟ್ಟುಕೊಂಡಿರುವುದಾಗಿ ಬಂದ ಮಾಹಿತಿ ಮೇರೆಗೆ ನಾನು ಮತ್ತು ಸಿಬ್ಬಂದಿಯವರು ಹಾಗೂ ಪಂಚರರನ್ನು ಕರೆದುಕೊಂಡು ಶಡ್ ಗೆ ಹೋಗಿ ಚೇಕ ಮಾಡಲಾಗಿ ಶಡ್ ನ ಒಳಗಡೆ 30 ರಕ್ತ ಚಂದನದ ಮರದ ತುಂಡುಗಳನ್ನು ಅಡಗಿಸಿ ಇಟ್ಟಿರುವುದು ಕಂಡು ಬಂದಿದ್ದು ಸದರಿ ರಕ್ತ ಚಂದನದ ತುಂಡುಗಳು 882 ಕೆಜಿ ಆಗಿದ್ದು ಅದರ ಮೌಲ್ಯ ರೂ.2646000/- ಸಾವಿರ ಆಗಿರುತ್ತದೆ. ಆದ್ದರಿಂದ ಸದರಿ ಶಡ್ ಮಾಲೀಕನ ಹೆಂಡತಿಯ ವಿಚಾರ ಮಾಡಲಾಗಿ ಮೇಲ್ಕಂಡ ಆರೋಪಿಗಳು ಹಳೆಯ ಸಾಮಾನು ಹಾಕಿಕೊಳ್ಳಲು ಶಡ್ ಬಾಡಿಗೆಗೆ ತೆಗೆದುಕೊಂಡಿದ್ದು,ಲ್ಯಾಪ್ ಟಾಪ್ ಮೂಲಕ ವರದಿ ತಯಾರಿಸಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲು ಮಾಡಲು ಪಿಸಿ 1415 ರವರ ಮೂಲಕ ಕಳುಹಿಸಿ ಕೊಟ್ಟ ವರದಿ ಮೇರೆಗೆ.</td></tr>
<tr><td>2</td><td>ಹೊಸಕೋಟೆ</td><td>ಮೊ.ಸಂ. 373/2024 ಕಲಂ 144, 145, 62, 80 & 144, 145 ಕೆ.ಎಫ್. ಆಕ್ಟ್ & 303(2) ಬಿ.ಎನ್. ಎಸ್.</td><td>1] ಸದಾಯನ್ ಬಿನ್ ಅಣ್ಣಾಮಲೈ ೨೮ ವರ್ಷ ನಂ 12/2 , ಮೆಲ್ಲತುಕ್ಕಲಿ ಗ್ರಾಮ ಮಣಿಯಾರಪ್ಪಪಾಳ್ಯ ವಿಳುಪುರಂ ತಮಿಳುನಾಡು<br>2] ವಿಜಯ ಕುಮಾರ್ ಬಿನ್ ಶ್ರೀನಿವಾಸನ್ 31 ವರ್ಷ ತೆಂಕಪ್ಪಟು ಪೋಸ್ಟ್ ವಡಕಾನುಡು ಅಟ್ಟೂರು ತಾಲ್ಲೂಕು ಸೇಲಂ ತಮಿಳುನಾಡು</td><td>6 ಕೆ.ಜಿ ರಕ್ತಚಂದನದ ತುಂಡುಗಳು ಅಂದಾಜು 177 ಕೆ.ಜಿ. ಅಂದಾಜು ಮೌಲ್ಯ 2464000/-</td><td>ಸಿಸಿ. ನಂ.9481 /2024 ರಲ್ಲಿ ವಿಚಾರಣೆಯಲ್ಲಿರುತ್ತದೆ.</td></tr>
<tr><td colspan="6">ದಿನಾಂಕ; 4/2/2024 ರಂದು ಗೊಟ್ಟಿಪುರ ಗೇಟ್ ಬಳಿಯ ಕೋಲಾರ-ಬೆಂಗಳೂರು ಎನ್.ಹೆಚ್-75 ರಸ್ತೆಯಲ್ಲಿ ನಿಂತು ಕಾರನ್ನು ಗಮನಿಸುತ್ತಿರುವಾಗ, ಟಿ.ಎನ್-20-02-76 ಕಾರನ್ನು ನಾವುಗಳು ನಿಲ್ಲಿಸಿ, ಸುತ್ತುವರಿದು, ಪರಿಶೀಲನೆ ಮಾಡಲಾಗಿ ಕಾರಿನ ಡಿಕ್ಕಿ ಹಾಗೂ ಹಿಂದಿನ ಸೀಟ್ ನ ಕೆಳ ಭಾಗದಲ್ಲಿ 6 ರಕ್ತ ಚಂದನದ ತುಂಡುಗಳಿದ್ದು , ಮುಂದಿನ ಕ್ರಮ ಜರುಗಿಸಬೇಕಾಗಿರುವುದರಿಂದ ಪ್ರಕರಣ ದಾಖಲಿಸಲಾಗಿರುತ್ತದೆ.</td></tr>
<tr><td>3</td><td>ಟಿ.ಎಸ್. ಹಳ್ಳಿ</td><td>ಮೊ.ಸಂ. 13/2024 ಕಲಂ 24, 62, 80, ಕೆ.ಎಫ್. ಆಕ್ಟ್ 144, 145 ರೂಲ್ಸ್ ಜೊತೆಗೆ 379 ಐಪಿಸಿ</td><td>1.ಮುಜ್ಜು ಶರೀಫ್<br>2.ಆಸೀಫ್ ಖಾನ್<br>3.ಸೈಯದ್ ನಜೀರ್<br>4.ಪಯಾಜ್ ಷರೀಫ್ @ ಫಯ್ಯಾ<br>ಕಟ್ಟಿಗೇನಹಳ್ಳಿ, ಗ್ರಾಮ, ಜಡಿಗೇನಹಳ್ಳಿ, ಹೋಬಳಿ, ಹೊಸಕೋಟೆ ತಾಲ್ಲೂಕು.</td><td>288.5 ಕೆ.ಜಿ ರಕ್ತಚಂದನದ ತುಂಡುಗಳು ಅಂದಾಜು ಮೌಲ್ಯ 865500/-</td><td>ಸದರಿ ಪ್ರಕರಣವು ಮಾನ್ಯ ಸಿ.ಜೆ. & ಜೆ.ಎಂ.ಎಫ್.ಸಿ ನ್ಯಾಯಾಲಯದ</td></tr>
</table>

<table>
<tr><td></td><td></td><td></td><td></td><td></td><td>ಸಿಸಿ. ನಂ.7750 /2024 ರಲ್ಲಿ ವಿಚಾರ ಣೆಯಲ್ಲಿ ರುತ್ತದೆ</td></tr>
<tr><td colspan="6">ದಿನಾಂಕ:3/2/2024 ರಂದು ಪರ್ಯಾದುದಾರರಿಗೆ ಬಂದ ಖಚಿತ ಮಾಹಿತಿ ಮೇರೆಗೆ ದೇವರಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ 21 ರ ಜಮೀನಿನ ನೀಲಗಿರಿ ತೋಪಿನಲ್ಲಿ ಅಕಸ್ಮಿಕವಾಗಿ ಕಾರಿನಲ್ಲಿ ರಕ್ತ ಚಂದನದ ಮರದ ತುಂಡುಗಳನ್ನು ಅಡಗಿಸಿಟ್ಟಿರುತ್ತಾರೆಂದು ಬಂದ ಮಾಹಿತಿ ಮೇರೆಗೆ ಪಂಚರ ಸಮಕ್ಷಮ ಸಿಬ್ಬಂದಿಗಳೊಂದಿಗೆ ಹೋಗಿ ದಾಳಿ ಮಾಡಿ ಕಾಲಿನಲ್ಲಿದ್ದ 8 ರಕ್ತ ಚಂದನ ತುಂಡುಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಲಾಗಿರುತ್ತದೆ.</td></tr>
</table>